# ಇಸಾಬೆಲ್ಲಾ ಟೈಗರ್ ಮಾಥ್

**ಮಾರನೇ ದಿನ ಆ ಜಾಗದಲ್ಲಿ ಒಂದೇ ಒಂದು ಲಾರ್ವದ ಸುಳಿವೂ ಕೂಡ ಇರಲಿಲ್ಲ. ಟೈಗರ್ ಪತಂಗವೂ ಅಲ್ಲೆಲ್ಲೂ ಕಾಣಸಿಗಲಿಲ್ಲ!**

■ ಚಿತ್ರ ಮತ್ತು ಬರಹ:
**ಅಮೋಘ ಕೆ.ಎಸ್. ಶೃಂಗೇರಿ**





**ಸು**ಮಾರು 4 ಸೆಂ.ಮೀ.ನಷ್ಟು ಉದ್ದವಿರುವ ಈ ಪತಂಗಕ್ಕೆ ಇಸಾಬೆಲ್ಲಾ ಟೈಗರ್ ಮಾಥ್ ಎಂದು ಕರೆಯುತ್ತಾರೆ. ಆರ್ಕ್ಟಿಡೇ ಎಂಬ ಕುಟುಂಬ ವರ್ಗಕ್ಕೆ ಸೇರಿರುವ ಈ ಪತಂಗವು ವೈಜ್ಞಾನಿಕ ಜಗತ್ತಿನಲ್ಲಿ "ಪೈರ್‌ಹಾರ್ಕಿಶಿಯಾ ಇಸಾಬೆಲ್ಲಾ" ಎನ್ನುವ ಹೆಸರಿನಿಂದ ಗುರುತಿಸಲ್ಪಡುತ್ತದೆ.

ಜೂನ್ ತಿಂಗಳಿನಲ್ಲೊಮ್ಮೆ ಇಸಾಬೆಲ್ಲಾ ಟೈಗರ್ ಪತಂಗವೊಂದು ನಮ್ಮ ಮನೆಯ ಒಳಗೆ ಬಾಗಿಲಿನ ಮೇಲೆ ಕುಳಿತಿದ್ದನ್ನು ಗಮನಿಸಿದೆ. ಕೆಲ ಹೊತ್ತಿನ ನಂತರ ನಾನು ಮತ್ತೆ ಆ ಜಾಗದೆಡೆ ಕಣ್ಣು ಹಾಯಿಸಿದಾಗ ಅಲ್ಲಿ ಟೈಗರ್ ಪತಂಗದ ನೂರೈವತ್ತಕ್ಕೂ ಹೆಚ್ಚಿನ ಬಿಳಿ ಬಣ್ಣದಿಂದ ಕೂಡಿದ ಪುಟ್ಟಪುಟ್ಟ ಮೊಟ್ಟೆಗಳು ಕಂಡವು.

(8ನೇ ಪುಟ ನೋಡಿ)